ISSN: 2249-894X IMPACT FACTOR : 3.8014 (UIF)

REVIEW OF RESEARCH

VOLUME - 6 | ISSUE - 9 | JUNE - 2017

# ಗಿರೀಶ್ ಕಾರ್ನಾಡರ 'ತಲೆದಂಡ'ದ ತಲಸ್ಪರ್ಶಿ ಅಧ್ಯಯನ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**



ಬಹುಮುಖ ಪ್ರತಿಭೆಯುಳ್ಳ ಗಿರೀಶ ಕಾರ್ನಾಡರು ರಂಗನಟ, ನಾಟಕಕಾರ, ಚಲನಚಿತ್ರ, ಕಿರುತೆರೆಯ ನಟ, ನಿರ್ದೇಶಕ, ಚಿತ್ರಕಥಾ ಲೇಖಕ, ಭಾಷಾಂತರಕಾರ ಹಾಗೂ ಆಡಳಿತಗಾರ. ಒಬ್ಬ ನಾಟಕಕಾರನಾಗಿ ಜ್ಞಾನಪೀಠ ಪ್ರಶಸ್ತಿ ಪಡೆದದ್ದು ಕನ್ನಡಿಗರು ಮಾತ್ರವಲ್ಲ ಭಾರತೀಯ ನಾಟಕಕಾರರೆಲ್ಲರೂ ಹೆಮ್ಮೆ ಪಟ್ಟುಕೊಳ್ಳುವಂತದು. ನಾಟಕ ಕ್ಷೇತ್ರಕ್ಕೆ ಅದ್ವಿತಿಯ ಕೊಡುಗೆ ಕೊಟ್ಟ ಕಾರ್ನಾಡರು ಬರೆದಿರುವುದು ವಿರಳ. ಆದರೆ ಪ್ರಶಸ್ತಿಗಳ ಪಟ್ಟಿಯೇ ಬೆಳೆಯುತ್ತಾ ಸಾಗುತ್ತದೆ. ಇವರು ಬರೆದಿರುವ ಹತ್ತು ಪ್ರಮುಖ ನಾಟಕಗಳು ಯಯಾತಿ 1961, ಮಾ ನಿಷಾದ 1963, ತುಘಲಕ 1964, ಹಯವದನ 1971, ಅಂಜುಮಲ್ಲಿಗೆ 1977, ಹಿಟ್ಟಿನ ಹುಂಜ 1980, ನಾಗಮಂಡಲ 1988, ತಲೆದಂಡ 1990, ಅಗ್ನಿ ಮತ್ತು ಮಳೆ 1995 ಮತ್ತು ಟಿಪ್ಪು ಸುಲ್ತಾನ ಕಂಡ ಕನಸು 2000, ಇತ್ತಿಚೇನಲ್ಲಿ ಅವರ ಮೂರು ವರ್ಷಗಳ ಲಂಡನ್ ವಾಸದ ಅವಧಿಯಲ್ಲಿ ಹಿಟ್ಟಿನ ಹುಂಜವನ್ನು 'ಬಲಿ' ಎಂದು ನಾಮಕರಣ ಮಾಡಿದ್ದಾರೆ. ಈ ಲೇಖನದ ಉದ್ದೇಶ ತಲೆದಂಡ ನಾಟಕವನ್ನು ತಲಸ್ಪರ್ಶಿಯಾಗಿ ನೋಡುವುದಾಗಿದೆ.

## ಪ್ರಸ್ತಾವನೆ

ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಯ ಅಲೆಯನ್ನು ಸೃಷ್ಟಿಸಿದ, ಮಹಾಮಾನವತಾವಾದಿ ಬಸವಣ್ಣನವರ ಕುರಿತು ರಚಿಸಿರುವ ನಾಟಕವಾಗಿದೆ. ಕಾರ್ನಾಡರು ಪುರಾಣ, ಇತಿಹಾಸ, ವೇದ, ಉಪನಿಷತ್ತುಗಳಲ್ಲಿ ನಡೆದು ಹೋದ ಸತ್ಯಘಟನೆಗಳನ್ನು ಇಟ್ಟುಕೊಂಡು ನಾಟಕ ರಚಿಸುವುದರಲ್ಲಿ ಸಿದ್ಧ ಹಸ್ತರು. 'ತಲೆದಂಡ' ನಾಟಕ ಮೂರು ಅಂಕಗಳಲ್ಲಿ ಹದಿನಾರು ದೃಶ್ಯಗಳ ಹರವನ್ನು ಪಡೆದಿದೆ. ಬಿಜ್ಜಳ ಮತ್ತು ಬಸವಣ್ಣನವರ ಕೊನೆಯ ಎರಡು ತಿಂಗಳ ಅವಧಿಯಲ್ಲಿ ನಡೆದಿರುವ ಘಟನೆಗಳೆ ಸೀಮಿತವೆನಿಸುತ್ತವೆ. ಮೊದಲ ಅಂಕದಿಂದ ಎರಡನೇ ಅಂಕದವರೆಗಿನ ಅವಧಿ ಹತ್ತು–ಹನ್ನೊಂದು ದಿನಗಳು, ಎರಡನೇಯ ಅಂಕದಲ್ಲಿ ಎರಡೆ ದೃಶ್ಯಗಳಿದ್ದು ಮೊದಲ ದೃಶ್ಯ (5) ಒಂದೇ ದಿನದ ಘಟನೆ ಶೀಲ ಕಲಾವತಿಯರ ಮದುವೆ ನಿರ್ಣಯ, ಮುಂದಿನ ದೃಶ್ಯ–6 ರಲ್ಲಿ ಲಗ್ನ ಆದ ಸುದ್ದಿ ಲಗ್ನದ ನಿರ್ಣಯಕ್ಕೂ, ಲಗ್ನಕ್ಕೂ ಮಧ್ಯೆ ಎಷ್ಟು ದಿನಗಳ ಅಂತರವಿತ್ತೆಂಬುದು ನಾಟಕದಲ್ಲಿ ನಿರ್ದಿಷ್ಟವಾಗಿಲ್ಲ ಮೂರನೇಯ ಅಂಕ ಎರಡನೇ ಅಂಕಗಳ ನಡುವೆ ಒಂದು ದಿನ ಅಥವಾ ಅದಕ್ಕೂ ಕಡಿಮೆ ಅವಧಿ ಇರಬಹುದು ದೃಶ್ಯ 10–11ರ ನಡುವೆ ಕೆಲ ದಿನಗಳ ಅಂತರ, ಹಾಗೇ 11 ರಿಂದ 15ರವರೆಗೆ ಪ್ರತಿ ದೃಶ್ಯದ ನಡುವೆ ದಿನಗಳ ಅಂತರ ಮಾತ್ರ ಇರುವಂತಿದೆ. 15ನೇ ದೃಶ್ಯ ಹಾಗೂ 16 ಈ ದೃಶ್ಯಗಳ ಮಧ್ಯೆ ಅಂತರ ಸ್ವಲ್ಪ ಹೆಚ್ಚು ದಿನಗಳದ್ದಿರಬಹುದಾದರೂ ಒಂದು ವಾರದ ಅವಧಿಯನ್ನು ಮೀರಿಲ್ಲ ನಾಟಕದ ಕೊನೆಯಲ್ಲಿ ಬಿಜ್ಜಳನ ಕೊಲೆಯಾಗುತ್ತದೆ. ಜಗದೇವ ಕೊಲೆ ಮಾಡುತ್ತಿದ್ದರೂ ಸೋವಿದೇವ ಎಂದೇ ಭ್ರಮಿಸುತ್ತಾನೆ. ಬಿಜ್ಜಳ ಸಾಯುವ ಮುನ್ನ ದಿನವೇ ತಾನು ಕಲ್ಯಾಣವನ್ನು ಬಿಟ್ಟು ಕಪ್ಪಡಿ ಸಂಗಮಕ್ಕೆ ಹೋಗುತ್ತೇನೆ ಎಂದು ಬಸವಣ್ಣ ಹೇಳಿ ಹೊರಟಿರುವುದು ಇಲ್ಲಿ ಮೂಡಿ ಬಂದಿದೆ.

## ತಲಸ್ಪರ್ಶಿ ಅಧ್ಯಯನ

ಕಲ್ಯಾಣ ಕ್ರಾಂತಿಗೊಂದು ನಿದರ್ಶನವೇ ಈ ತಲೆದಂಡ ನಾಟಕ, ಭಕ್ತಿ ಭಂಡಾರಿ ಬಸವಣ್ಣನ ಕಾರ್ಯಕ್ಷೇತ್ರವಾದ ಕಲ್ಯಾಣ ಸುಸೂತ್ರವಾಗಿ ನಡೆಯುತ್ತಿತ್ತು. ಕಲಚೂರಿ ವಂಶದ ಬಿಜ್ಜಳ ಮಹಾರಾಜ ಬಸವಣ್ಣನ ಪರನಾಗಿದ್ದ ಆದರೆ ಬಿಜ್ಜಳನ ಮಗ ಸೋವಿದೇವ ಬಸವಣ್ಣನೆಂದರೆ ಕೆಂಡಾಮಂಡಲವಾಗುತ್ತಿದ್ದ. ಶರಣರೆಂದರೆ ಹೊಟ್ಟೆ ಉರಿದುಕೊಳ್ಳುತ್ತಿದ್ದ. ಸೋವಿದೇವನಿಗೆ ದಾಮೋದರ ಭಟ್ಟ. ಮಂಚಣಕ ಮಿತ್ರನಂತಂವರು ತಲೆ ಕೆಡಿಸುವವರು ಜೊತೆಯಲ್ಲಿ ಇದ್ದರು. ಒಂದು ಲಕ್ಷ ತೊಂಬತ್ತಾರು ಸಾವಿರ ಗಣಂಗಳಿಗೆ ದಾಸೋಹ ಮಡುತ್ತಾನೆಂದರೆ, ರಾಜಬೊಕ್ಕಸದಿಂದ ಬಸವಣ್ಣ ಹಣ ಕದಿಯುತ್ತಾನೆ ಎನ್ನುವುದು ಈತನ ತರ್ಕ, ಆದರೆ ಒಂದು ಸಲ ಬಸವಣ್ಣ ಮಡ್ದೂರಿಗೆ ಹೋದಾಗ ಭಂಡಾರದ ಲೆಕ್ಕ ಮಾಡಿಸಲು ಮುಂದಾಗುತ್ತಾನೆ

**"ಸೋವಿದೇವ: (ಕೂಗುತ್ತ) ಹುಗದ ಹಾಕತೀನಿ ಅವರನ್ನ ಸಿಗಿದು ತುಂಡು ತುಂಡು ಮಾಡಿ ಬ್ಯಾಟೀ ನಾಯಿಗೆ ಉಣಸತೀನಿ**
**ರಂಬಾವತಿ: ಹಂಗ ಸಿಟ್ಟಿಗೇಳಬ್ಯಾಡೋ ಯಾಕ ಆ ಶರಣರನ್ನ ಎದುರು ಹಾಕ್ಕೋತಿ? ಇವರಿಗೆ ಎಲ್ಲರ ಗೊತ್ತಾ ತೊಂದರೆ...ಸೋವಿದೇವ: ಅಪ್ಪನ ಆ ತೊತ್ತಿನ ಮಕ್ಕಳನ್ನ ತಲಿಮ್ಯಾಗ ಏರಿಸಿಟ್ಟಾನ, ಇಲ್ಲದಿದ್ದರೆ ಈ ಸೊಕ್ಕ? ನಾ ಕಳಚೂರ್ಯ ರಾಜವಂಶದ ರಾಜಪುತ್ರ ನನ್ನ ಹಿಂಗ ನಗಪಾಟಲ ಮಾಡತಾರ, ಊರಿಗೂರು ನೋಡ ನನ್ನ ಮಸಡೀಗೆ ಮಸಿ ಬಳೀತಾರ ಅಂದರ ಹ್ಯಾಂಗ ಕೊಬ್ಬಿರಬಾರದು ಈ ನಾಯಿಗೋಳು"**[1]

ಎಂದು ಶರಣರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ಬಸವಣ್ಣನವರ ನೆಚ್ಚಿನ ಭಟ್ಟ ಜಗದೇವ ಬಸವಣ್ಣನವರ ಮೇಲೆ ಭಕ್ತಿ ಎಷ್ಟಿತ್ತೆಂದರೆ ತನ್ನ ತಂದೆ ಸಾವಿನಂಚಿನಲ್ಲಿದ್ದರೂ ಆತ ಮನೆಗೆ ಬರುವುದಿಲ್ಲ ಬಸವಣ್ಣನವರ ಭಂಡಾರದ ಕಾವಲು ಮಾಡುತ್ತಾನೆ. ಜಗದೇವ ಬ್ರಾಹ್ಮಣನಾದರೂ ಬಸವಣ್ಣನವರ ಜಾತೀಯತೆಗೆ ಮಾರುಹೋಗಿ ಮಲ್ಲಿಭೊಮ ಮಾದಿಗರವನಾದರು ತನ್ನ ಮನೆಯಲ್ಲಿ ಕರೆದು ಉಪಚಾರ ಮಾಡುತ್ತಾನೆ.

ಬಸವಣ್ಣನವರು ಊರಾಗಿಲ್ಲದ ಸಮಯ ನೋಡಿ ಭಂಡಾರದ ಬಾಗಿಲು ತೆಗೆದಿರುವ ಸುದ್ದಿ ಎಲ್ಲಾ ಶರಣರಿಗೂ ತಿಳಿಸಿ ಸಾವಿರಾರು ಶರಣರು ಭಂಡಾರದ ಎದುರು ಬಿಡಾರ ಹೂಡುತ್ತಾರೆ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿಯೇ ಜಗದೇವನ ತಂದೆ ಸಾಂಬಶಿವಶಾಸ್ತ್ರಿ ಸಾವು ಬದುಕಿನ ಮಧ್ಯೆ ಹೋರಾಡುತ್ತಿರುತ್ತಾನೆ. ಯಾರ ಕೈಯಿಂದಲೂ ಹೇಳಿಕಳಿಸಿದರು ಜಗದೇವ ಮನೆಗೆ ಬರುವುದಿಲ್ಲ ಜಗದೇವನ ತಾಯಿ ಅಂಬಕ್ಕ ಮನೀಯೊಳಗ ಸುಖಾ ಇಲ್ಲ ಹೇಳತೀನಿ ನಮ್ಮ ಜಗಣ್ಣಗೆ ಬಸವಣ್ಣನ ಹುಚ್ಚು ಹಿಡಕೊಂಡಾಗಿನ ತೊಟ್ಟು ಮನಿಯೊಳಗ ದಿನ ಬೆಳಗಾದರ ಜಗಳ, ಇವರು ಸನಾತನ ಧರ್ಮ ಬ್ರಾಹ್ಮಣ್ಯ ಅಂತ ಜಗ್ಗಬೇಕು ಅವ ಶರಣಧರ್ಮ–ಲಿಂಗ–ಜಂಗಮ ಅಂತ ಹಾಕ್ಯಾಡಬೇಕು ಮನೀ ಸೂರ ಜೀವ ಕೊಟ್ಟಣಾಗೇದ ಎಂದು ಹೇಳುತ್ತಾಳೆ.

ಸಾಂಬಶಿವಶಾಸ್ತ್ರಿಗೆ ತಾನೂ ಸಾಯುವುದರ ಅರಿವಾಗುತ್ತದೆ. ಆದ್ದರಿಂದಲೇ ತನ್ನನ್ನು ಹಾಸಿಗೆಯಿಂದ ಕೆಳಗೆ ಹಾಕಿ ಲಗೂನ ಎತ್ತಿ ಹಾಕಿರಿ, ಜಗಣ್ಣ ಬಂದನಾ ಅಂತ ನೂರು ಸಾರಿ ಕೇಳುತ್ತಾನೆ. ತನ್ನ ಮಗ ಎದುರಿನಲ್ಲೆ ಇದ್ದರೂ ಆತನನ್ನು ತನ್ನ ಮಗ ಎಂದು ಗುರುತು ಹಿಡಿಯಲಾರ ಆತನಿಗೆ ಪ್ರಜ್ಞೆ ತಪ್ಪಿದೆ

**"ಶಾಸ್ತ್ರಿ: ಜಗ್ಗಣ್ಣಾ......**
**ಜಗದೇವ: ನಾ ಇಲ್ಲೆ ಇದ್ದಿನಪ್ಪಾ**
**ಶಾಸ್ತ್ರ ; ನೀ ಅಲ್ಲ, ನನ್ನಮಗ, ಅವ ಇಲ್ಲಧ ಸಂಸ್ಕಾರ ಆಗಾಂಗಿಲ್ಲ ಈ ಹೆಣ ನಾರಲಿಕ್ಕೆ ಹತ್ತೇದಂತ ಹೇಳು ಅವಗ, ಕರಿ ಜಗ್ಗಣ್ಣಾ ಬಾರೋ, ಎತ್ತೋ ಈ ಹೆಣ"**[2] ಎಂದು ಗೋಳಾಡುತ್ತಾನೆ. ಮಗ ಎದುರಿನಲ್ಲಿ ಇದ್ದರು ಆತ ಗುರುತುಹಿಡಿಯಲಾರ.

ಸೋವಿದೇವ ಭಂಡಾರದ ಕಿಲಿ ತಗಸತಾರ ಎನ್ನುವ ಸುದ್ದಿ ಕಾಳ್ಗಿಚ್ಚಿನಂತೆ ಹರಡಿ ಸಹಸ್ರಾರು ಶರಣರ ಜಂಗುಳಿ ಭಂಡಾರದ ಎದುರು ಹೋಗಿ ಬಿಡಾರ ಹೂಡುತ್ತಾರೆ 'ಬಸವಣ್ಣ ಬಂದು ನಾ ಬಂದೀನೀಗ ನೀವು ಹೋಗಿರಿ ಅಂದಾಗ ಧರಣಿ ಬಿಟ್ಟೆದ್ದು ಮನಿಗೆ ಹೋಗ್ಯಾರ' ಈ ಶರಣರಲ್ಲಿ ಬಸವ ಭಕ್ತಿ ಮತ್ತು ಒಗ್ಗಟ್ಟಿನಿಂದ ಇದ್ದಾರೆ. ಬಸವಣ್ಣನ ವಿರುದ್ಧ ಆರೋಪ ಹೊರಿಸಿದ್ದಕ್ಕೆ ಭಯಂಕರ ಕೋಪಿಷ್ಟರಾಗಿ ಬಿಜ್ಜಳ ಸೋವಿದೇವನನ್ನು ನೋಡಲು ಬರುತ್ತಾನೆ.

**"ಬಿಜ್ಜಳ: (ಗರ್ಜಿಸುತ್ತಾ ಪ್ರವೇಶಿಸುತ್ತಾನೆ) ಇಲ್ಲಿ ಬಂದು ಅಡಗಿಕೊಂಡು ಕುಂತಾನೇನು?**
**ರಂಬಾವತಿ: ಇದೇನ್ರಿ ಹಿಂಗ? ಆರತಿ ಬೆಳಗಿಲ್ಲ, ದಿಟ್ಟಿ ಇಳಿಸಿಲ್ಲ, ಹಾಂಗ ಒಳಗ ನುಗ್ಗಿದರ! ಸ್ವಲ್ಪ ತಡೀರಿ ಅಲ್ಲೆ ಈರವ್ವ**
**ಬಿಜ್ಜಳ: ನಿನ್ನ ಈರವ್ವ–ಪಾರೆವ್ವ ಎಲ್ಲಾ ಹಾಳಾಗಿ ಹೋದರು ಆ ಕುಲಕಂಟಕ ಸೂಳೀಮಗ ಬಂದಾನೇನಿಲ್ಲಿ ಹೇಳು (ಸೋವಿದೇವನನ್ನು ನೋಡಿ) ಇಲ್ಲಿ ಬಾರೋ ಇಲ್ಲಿ, ಅರಬ್ಯಾ ಕೆಂಪರಬ್ಯಾ ಹೀಂಗ ಹೆಂಗಸೂರ ಬುಡಕ್ಕ ಅಂಟಿಕೊಣ್ಣಾಕ ನಾಚಿಕೆ ಅನಿಸೂದಿಲ್ಲ**
**(ಸೋವಿದೇವ ಹೊರಗೆ ಬರುತ್ತಾನೆ)**

**ಅವನ ಅಧಿಕ ಪ್ರಸಂಗ ಮಾಡಿದೇ ನಾ ಇಲ್ಲದ ವ್ಯಾಳೇಕ್ ಭಂಡಾರಕ್ಕೆ ಕೈ ಹಚ್ಚಾರ ಯಾರು ಅಪ್ಪಣೆ ಕೊಟ್ಟಿದ್ದರು ನಿನಗ?"**[3] ಬಸವಣ್ಣ ಊರಾಗ ಇಲ್ಲದ ವೇಳೆ ಭಂಡಾರ ತಪಾಸಣೆ ಮಾಡಿಸ್ಯಾನ, ಬಸವಣ್ಣ ಬಂದರ ಹೆದರಿ ಓಡಿ ಹೊಂಟಾನ ಮನೀಗೆ, ಹದಿನೈದು ಸಾವಿರ ಮಂದಿ ಕಣ್ಣೆದುರಿಗೆ ಬಸವಣ್ಣ ಇವನ ಕೈಹಿಡಿದು ಭಂಡಾರದಾಗ ಎಳಕೊಂಡ ಹೋಗಿ ಹೊರಗಿನಿಂದ ಕೀಲಿ ಹಾಕಸ್ಯಾನ. ಎಂದು ಊರಿಗಿಊರೆ ಸುದ್ದಿ ಹರಡೀ ಬಿಟ್ಟಾವ ಎನ್ನವುದು ಬಿಜ್ಜಳನ ತರ್ಕ.

ಸೋವಿದೇವ ಭಂಡಾರ ಲೆಕ್ಕ ಒಂದು ಕವಡಿ ಹೆಚ್ಚು ಕಮ್ಮಿ ಆಗಿರುವುದಿಲ್ಲ. ನೆರೆದ ಬಸವಣ್ಣನ ಭಕ್ತರು ಇದೊಂದು ಪವಾಡ ಎಂದೇ ಊಹಿಸುತ್ತಾರೆ. ಬಸವಣ್ಣ ತನಗೆ ಭಂಡಾರದ ಪದವಿ ಒಲ್ಲೆ ಎಂದು ಬಿಟ್ಟು ಬಿಡುತ್ತಾನೆ.

ಈ ಸಮಯದಲ್ಲಿ ಮದುವರಸರ ಮಗಳು ಕಲಾವತಿಗೂ ಮತ್ತು ಹರಳಯ್ಯನ ಮಗ ಶೀಲ ಮದುವೆ ನಿಶ್ಚಯಿಸಿಕೊಂಡು ಬಸವಣ್ಣನ ಹತ್ತಿರ ಬರುತ್ತಾರೆ. ಬಸವಣ್ಣ ಆಶ್ಚರ್ಯದಿಂದ **"ಹರಳಯ್ಯ ಇಲ್ಲಿ ತನಕ ನಾವು ಮಾಡಿದ್ದೆಲ್ಲ ತತ್ವದ ಮಾತಾತು ಒಡನಾಟದ ಮಾತಾತು, ಆದರ ಇದು, ಇದು – ಲಗ್ನ ! ವರ್ಣಾಶ್ರಮ ಧರ್ಮದ ಬೇರಿಗೇ ಕೊಡಲಿ ಏಟು, ಕಳೆದು ಎರಡು ಸಾವಿರ ವರ್ಷದಾಗ ಇಂಥ ಸಂಬಂಧ ಕೂಡಿಲ್ಲ, ಸನಾತನಿಗಳು ಕೂಡ ಗೊಟ್ಟಿಲ್ಲ ಈ ಸುದ್ದಿ ಗೊತ್ತಾದರ ಎಂಥ ವಿಷ ಹೊರ ಹೊಮ್ಮತದೆಂಥ ಜ್ವಾಲೆ ಭುಗಿಲೇಳತದ ಗೊತ್ತದ ನಿಮಗೆಲ್ಲಾ"**[4] ಈ ಅಂತರಜಾತಿ ವಿವಾಹದಿಂದ ಮುಂದೆ ಆಗುವ ಕ್ರಾಂತಿಯ ಬಗ್ಗೆ ಬಸವಣ್ಣನವರಿಗೆ ಕಲ್ಪನೆಯಿತ್ತು. ಆದ್ದರಿಂದಲೇ ಎಚ್ಚರಿಸುತ್ತಾರೆ, ಬಸವಣ್ಣನವರು ವಾಸ್ತವ ಪ್ರಜ್ಞೆಯಿಂದಲೇ ಮಾತನಾಡುತ್ತಾರೆ

**"ನಮ್ಮ ಹೊಟ್ಟ್ಯಾಗ ಹುಟ್ಟಿರೋ ಈ ಮಕ್ಕಳ ಬಾಳೇವಿನ ಮಾತದ ನಾಳೆ ಅವರು ಮನಿ ಮಾಡಿದಲ್ಲಿ, ಒಲಿ ಹೂಡಿದಲ್ಲಿ ಸನಾತನಿಗಳ ಹಗೆ ಅವರನ್ನ ಬೆಂಬತ್ತಿ ಬರತದ, ಹಾವಿನ ಪಡೆ ಬಂಧಾಂಗ ಆಗ ಅವರಿಗೆ ಯಾರು ಕಾವಲು? ಹಿಂದಾಗಡೆ ಪಶ್ಚಾತ್ತಾಪ ಪಡುವುದಕ್ಕಿಂತ ಮೊದಲಖ ಎಚ್ಚರ ವಹಿಸಿರೋದ ಉತ್ತಮ"**[5]

ಈ ಮಾತುಗಳಿಂದ ನಯವಾಗಿ ಬಸವಣ್ಣ ತಿರಸ್ಕರಿಸುತ್ತಾನೆ. ಅವನ ಶರಣ ಬಳಗ ಇದಕ್ಕೆ ಒಪ್ಪುವುದಿಲ್ಲ. ತತ್ವ ಆಚಾರ ಹೇಳುವವ ನೀನೆ ಹೀಗೆಂದರೆ ಹ್ಯಾಂಗ ಎಂದು ಆತನನ್ನು ಒಪ್ಪಿಸುತ್ತಾರೆ. ಬಸವಣ್ಣನವರು ಬಿಜ್ಜಳನನ್ನು ಒಪ್ಪಿಸುತ್ತಾರೆ.

ಹಲವು ವಿರೋಧಗಳ ಮಧ್ಯೆ ಶೀಲ ಮತ್ತು ಕಲಾವತಿಯರ ವಿವಾಹವೇನು ನಡೆದು ಹೋಗುತ್ತದೆ. ಈ ಮದುವೆ ಕಿಡಿ ಕ್ರಾಂತಿಯಾಗಿ ಮಾರ್ಪಟ್ಟು ಈಡಿ ಕಲ್ಯಾಣನಗರವನ್ನೇ ಸುಟ್ಟು ಬಿಡುತ್ತದೆ. ಈ ಮದುವೆಗೆ ಪರೋಕ್ಷವಾಗಿ ಬಿಜ್ಜಳ ಮಹಾರಾಜನ ಕೈವಾಡವಿದೆಯೆಂದು ಶರಣರು ಆತನ ಕೊಲೆ ಮಾಡುತ್ತಾರೆ. ಇತ್ತ ಕಡೆ ಸೋವಿದೇವ ಶರಣರನ್ನು ಕಂಡಲ್ಲಿ ಕಡಿದು ಹಾಕಿರಿ ಅವರ ವಚನಗಳನ್ನು ಸುಟ್ಟುಹಾಕಿರಿ ಎಂದು ಸೈನಿಕರಿಗೆ ಆಜ್ಞೆ ಮಾಡುತ್ತಾನೆ. ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಕಪ್ಪಡಿಗೆ ಹೋಗುತ್ತಾರೆ. ಶರಣರು ಗುಂಪು ಗುಂಪಾಗಿ ಕಲ್ಯಾಣವನ್ನುತೊರೆದು ಬಿಜ್ಜಳ ಸೈನಿಕರೆದುರು ಹೋರಾಡುತ್ತಲೆ ಪ್ರಾಣ ಬಿಡುತ್ತಾರೆ. ಈಡಿ ಕಲ್ಯಾಣ ಕ್ರಾಂತಿಯ ಬೀಡಾಗುತ್ತದೆ. ರಕ್ತದ ಹೊಳೆ ಕಲ್ಯಾಣದ ಬೀದಿ ಬೀದಿಗಳಲ್ಲಿ ಹರಿಯುತ್ತದೆ. ಶೀಲ, ಕಲಾವತಿ, ಮಧುವರಸ, ಹರಳಯ್ಯರನ್ನು ಕಣ್ಣು ಕೀಳಿಸಿ ಎಳೆಹೊಟೆ ಶಿಕ್ಷೆ ಕೊಡುತ್ತಾರೆ. ಇದರಿಂದ ಶರಣರು ಒಗ್ಗಟ್ಟಾಗಿ ಹೋರಾಡುತ್ತಾರೆ. ಕಪ್ಪಡಿಗೆ ಬಂದ ಈ ಸುದ್ದಿಯನ್ನು ಕೇಳಿ ಬಸವಣ್ಣ

**"ಯಾರ ಹೆಸರು? ಯಾರ ಗೂಡ? ಯಾರಗಾಯ? ಯಾರ ನೆತ್ತರು? ಈ ಹೆಣ ನನ್ನದು ಬಿಜ್ಜಳನ ಹಂತಕನೂ ನಾನು ಪ್ರಭುದೇವರು ನಡೆಸಿದ ಮೆರವಣಿಗೆಯೊಳಗೆ ಇಥ ಕೊನಿ ಪ್ರಸಂಗ ವೆಷ ಮುಗಿದವು ಉತ್ಸವ ಮುಗೀತು ಇರುಳು ಕಳತು ಈಗ ಬೀದಿಯೆಲ್ಲ ಬರಿದು, ಶಬ್ದ ಮುಗ್ಧ ಕೂಡಲ ಸಂಗಮದೇವ ಇನ್ನೂ ಈ ಗರ್ಭಗುಡಿಯನ್ನ ನಿನ್ನ ಜ್ಯೋತಿಯ ಕುಡಿಯಲ್ಲಿ ಹೀರಿಕೊಂಡು ಬಿಡು ತಂದೆ ಬೆಳಗು ಬೆಳಗಿನೊಳಗೆ ಬೆಳಗು ಮಹಾಬೆಳಗು"**[6] ಈ ರೀತಿ ಬಸವಣ್ಣ ಸಾವನ್ನು ಎದುರು ನೋಡುತ್ತಾನೆ.

ಕಲ್ಯಾಣನಗರದಲ್ಲಿ ಹಾಹಾಕಾರ, ಎಲ್ಲಿ ನೋಡಿದಲ್ಲಿ ಕೊಲೆ ಸುಲಿಗೆ ಬಡೆದಾಟ, ಹೊಡೆದಾಟದ ಬೆಂಕಿ, ಸೋವಿದೇವನನ್ನು ಕಲ್ಯಾಣಕ್ಕೆ ಬರಲು ಹೇಳುತ್ತಾರೆ. ದಾಮೋದರ ಕಲ್ಯಾಣಕ್ಕೆ ಹೋಗಿ ಹೊಸ ರಾಜ್ಯ ಕಟ್ಟಲು ಹೇಳುತ್ತಾನೆ. ಸೋವಿದೇವ ಅವನ ಬಾಯಿ ಮುಚ್ಚರೋ ಎಂದರೆ ಅಂಗ ರಕ್ಷಕ ಅವನ ತಲೆ ಕತ್ತರಿಸುತ್ತಾನೆ 'ರಾಜಕಾರಣ ಅಂದಮ್ಯಾಗ ಹೀಂಗಾಗೂದ' ಎಂದು ಸಲ್ಲಿಸಾಗಿ ಹೇಳುತ್ತಾನೆ

**"ಸೋವಿದೇವ: ಅಟ್ಟಿಕೊಂಡು ಹೋಗರಿ ಅವರನ್ನ ಹೆಣ್ಣು-ಗಂಡು ಮಗು ಅಂತ ನೋಡದ ಕಂಡಲ್ಲೆ ಕಡದು ಹಾಕರಿ ಬ್ಯಾಟೀ ನಾಯಿ ಹಚ್ಚರಿ ಅವರ ಹಿಂಬಾಲಾ ಕಂಟಿ ಕಂಟಿಅರಸರಿ ಈ ರಾಜದ್ರೋಹಿಗಳಿಗೆ ಆಸರೆ ಕೊಟ್ಟವರ ಮನೀಗೆ ಕೊಳ್ಳಿಯಿಡಿರಿ ಅವರ ತತ್ವದ ಕಡತ ಒಂದೂ ಉಳೀಧಾಂಗ ನೋಡಿಕೋರಿ ಅವರ ಗ್ರಂಥಗಳನ್ನೆಲ್ಲ ಸುಟ್ಟು ಹಾಕರಿ, ಪುಟ-ಪುಟ ಹರಿದು ಬಾವಿಗೆ ಚೆಲ್ಲರಿ, ಶರಣರ ದನೀ ಸದ್ದೂ ಉಳೀಧಾಂಗ ಹಿಚುಕಿ ಬಿಡರಿ"**[7] ಆಜ್ಞೆ ಹೊರಡಿಸುತ್ತಾನೆ. ಈ ರೀತಿ ಸಿಕ್ಕ ಶರಣರ ಬರ್ಬರ ಹತ್ಯೆ ಮಾಡುತ್ತಾರೆ. ಸ್ತ್ರೀಯರು ಎನ್ನದೆ, ಮಕ್ಕಳೆನ್ನದೆ ಸಿಕ್ಕ ಸಿಕ್ಕವರನ್ನು ಕಡಿದು ಚೆಲ್ಲುತ್ತಾರೆ.

**"ಇನ್ನೂ ಮುಂದೆ ಎಲ್ಲರೂ ಎಚ್ಚರ ವಹಿಸತಕ್ಕದ್ದು ನಾಡಿಗೆ ರಾಜನೆ ತಂದಿ ಪ್ರಜೆಗಳು ಅವನ ಮ್ಯಾಗ ಮಕ್ಕಳ ಹಾಂಗ ಪ್ರೀತಿ ಮಾಡತಕ್ಕದ್ದು ಅವ ಹೇಳಿಧಾಂಗ ಕೇಳತಕ್ಕದ್ದು, ಇಲ್ಲದಿದ್ದರ ರಾಜ್ಯಕ್ಕ ಕೇಡು.**

**ಅರಸನ ವಿರುದ್ಧ, ಅವನ ದೊರೆತನದ ವಿರುದ್ಧ, ಅವನ ಊಳಿಗದ ವಿರುದ್ಧ, ಅಧಿಕಾರಿಗಳ ವಿರುದ್ಧ ಯಾರು ಆಡಿಕೋತಾರೋ ಅವರ ನಾಲಿಗೀನ ಸೀಳಹಾಕಲಾದೀತು, ಶರಣರು, ನಾಸ್ತಿಕರು, ಹೊರನಾಡಿನವರು, ಹೊಸ ವಿಚಾರಗಳನ್ನ ಹರಡಿಸುವವರು ಇವರನ್ನ ರಾಜ್ಯದಿಂದ ಹೊರಗೆ ಓಡಿಸಲಾದೀತು ಶೂದ್ರರು ಹಾಗೂ ಸ್ತ್ರೀಯರು ಪರಂಪರೆಯ ಮಿತಿಯೊಳಗ ಮರ್ಯಾದಿಯಿಂದ ಬಾಳಿದರು ಸರಿ, ಇಲ್ಲಂತಂದರ ಅವರ ಗತಿ ನಾಯಿಗೂ ಕಡೆ ಆದೀತು ಪ್ರತಿಯೊಬ್ಬ ಗಂಡು ಸನಾತನ ಧರ್ಮ, ವರ್ಣ ವ್ಯವಸ್ಥೆಯ ರಕ್ಷಣೆಗಾಗಿ, ತನ್ನ ರಾಜನ ಸಲುವಾಗಿ ಪ್ರಾಣ ತೆರಲಿಕ್ಕ ಸಿದ್ಧನಾಗಿರೋ ಸೈನಿಕನಾಗಿರತಕ್ಕದ್ದು, ರಾಜಾ ಪ್ರತ್ಯಕ್ಷೆ ದೇವತಾ"**[8] ವೈದಿಕರ ದಬ್ಬಾಳಿಕೆಯ ಮಾತುಗಳನ್ನಾಡುತ್ತಾನೆ. ಕೊನೆಗೆ ಸೋವಿದೇವನಿಗೆ ಪಟ್ಟ ಕಟ್ಟುತ್ತಾರೆ. ಕಲ್ಯಾಣದಲ್ಲಿ ಬಸವಣ್ಣ ನಿಲ್ಲದೆ ನೆಲ ಬರಿದಾಗುತ್ತದೆ. ನಡೆ, ನುಡಿ, ಸಿದ್ಧಾಂತಗಳೆ ಇಲ್ಲವಾಗುತ್ತದೆ.

**ಅಡಿಟಿಪ್ಪಣಿಗಳು :**

1. ಗಿರೀಶ ಕಾರ್ನಾಡ : ತಲೆದಂಡ . ಪು – 10.
2. ಗಿರೀಶ ಕಾರ್ನಾಡ : ತಲೆದಂಡ . ಪು – 9.
3. ಗಿರೀಶ ಕಾರ್ನಾಡ : ತಲೆದಂಡ . ಪು – 13.

VOLUME - 6 | ISSUE - 9 | JUNE- 2017

4. ಗಿರೀಶ ಕಾರ್ನಾಡ : ತಲೆದಂಡ . ಪು – 45.
5. ಗಿರೀಶ ಕಾರ್ನಾಡ : ತಲೆದಂಡ . ಪು – 45.
6. ಗಿರೀಶ ಕಾರ್ನಾಡ : ತಲೆದಂಡ . ಪು – 99.
7. ಗಿರೀಶ ಕಾರ್ನಾಡ : ತಲೆದಂಡ . ಪು – 101.

ಗಿರೀಶ ಕಾರ್ನಾಡ : ತಲೆದಂಡ . ಪು – 101.